**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.513/2009**

**ಸಿ.ಡಬ್ಲ್ಯೂ- 6 ಪಿ.ಡಬ್ಲ್ಯೂ- 5**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಜಯ್ ಕುಮಾರ |
| ತಂದೆಯ/ ಗಂಡನ ಹೆಸರು | : | ಮರಿಯಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ಚಾಲಕ |
| ವಾಸ ಸ್ಥಳ | : | ಮೈಸೂರು |

**ದಿನಾಂಕ 24.07.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 1988 ರಿಂದ 2016 ರವರೆಗೆ ಚಾಲಕನಾಗಿ ಆಗಿ ಮೈಸೂರು ವಲಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಚಾಸಾ1 ರವರ ಜೊತೆ ಕೆಲಸ ಮಾಡುತ್ತಿದ್ದಾಗ 2009 ರಲ್ಲಿ ಸಂಜೆ 4.30 ಗಂಟೆ ಸಮಯಲ್ಲಿ ಚಾಸಾ4 ಮತ್ತು 5 ರವರನ್ನು ಕರೆದುಕೊಂಡು ಮನೆ ಹತ್ತಿರ ಬಾ ಎಂದು ಚಾಸಾ1 ರವರು ತಿಳಿಸಿರುತ್ತಾರೆ. ನಂತರ 9.00 ಗಂಟೆಗೆ ಚಾಸಾ1 ರವರ ಮನೆಯ ಹತ್ತಿರ ಹೋಗಿರುತ್ತೇವೆ. ಸದರಿ ದಿನ ಮೈಸೂರಿನಿಂದ ನಂಜಗೂಡು ಮಾರ್ಗವಾಗಿ ಬೇಗೂರ, ಎಡಿಯಾಲ, ಸರಗೂರು ಕಡೆಗೆ ಗಸ್ತು ತಿರುಗುತ್ತಿರುವಾಗ ಒಂದು ವಾಹನ ನಮ್ಮ ವಾಹನವನ್ನು ಹಿಂಭಾಲಿಸುತ್ತಿದ್ದು, ಸದರಿ ವಿಚಾರವನ್ನು ಚಾಸಾ1 ರವರಿಗೆ ತಿಳಿಸಿರುತ್ತೇನೆ. ಒಂದು ವಾಹನ ನಮ್ಮ ಎದುರುಗಡೆ ಬಂದು ನಿಲ್ಲಿಸಿ ಯಾರು ನೀವು ಎಂದು ಪ್ರಶ್ನಿಸಿರುತ್ತಾರೆ. ಆಗ ಚಾಸಾ1 ರವರು ನಾವು ಇಲಾಖೆಯವರು ಎಂದು ತಿಳಿಸಿರುತ್ತಾರೆ. ಇ ತರ ಓಡಾಡಿದರೆ ತೊಂದರೆಯಾಗುತ್ತದೆ ಒಡಾಡಬಾರದೆಂದು ಧಮಕಿ ಹಾಕಿರುತ್ತಾರೆ. ಆಗ ಚಾಸಾ1 ರವರು ನೀವು ಯಾರು ಎಂದು ಕೇಳಿದ್ದಕ್ಕೆ ಮೆಣಸು ಲಾರಿ ಬರುತ್ತಿದೆ ನಮ್ಮನ್ನು ಅಡ್ಡಿ ಪಡಿಸಬೇಡಿ ಎಂದು ಚಾಸಾ1 ರವರನ್ನು ಕೇಳಿರುತ್ತಾರೆ. ಆಗ ಚಾಸಾ1 ರವರು ಅವರನ್ನು ಹಿಡಿದುಕೊಳ್ಳಿ ಎಂದು ಹೇಳಿದಾಗ ನಮ್ಮ ಮೇಲೆ

ಹಲ್ಲೆ ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ಆಗ ಜೀಪಿನಿಂದ ಚಾಸಾ4 ಮತ್ತು 5 ರವರು ಇಳಿದು ಹೋದಾಗ ಒಬ್ಬ ಆಸಾಮಿ ಓಡಿ ಹೋಗಿರುತ್ತಾರೆ. ಜೀಪಿನ ಬಳಿ ಇದ್ದ ಆಸಾಮಿ ಸಹ ಓಡಿ ಹೋಗಿರುತ್ತಾನೆ. ನಂತರ ಚಾಸಾ1 ರವರು ಹೋಗಿ ದೂರು ಕೊಟ್ಟಿರುತ್ತಾರೆ. ಆರೊಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿತರು ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿ ನಮ್ಮ ಅಕ್ರಮವಾಗಿ ತಡೆದಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾವು ನಂಜನಗೂಡು ಮಾರ್ಗವಾಗಿ ಗಸ್ತು ಹೋಗಿರುತ್ತೇವೆ. 9.00 ಗಂಟೆಗೆ ಕಛೇರಿ ಬಿಟ್ಟು ರಾತ್ರಿ ಎಲ್ಲಾ ಗಸ್ತು ಮಾಡಿ 4.00 ಗಂಟೆಗೆ ಸ್ಥಳಕ್ಕೆ ಬಂದಿರುತ್ತೇನೆ. ಸದರಿ ದಿನ ಗಸ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ವಾಹನವನ್ನು ಆರೋಪಿತರು ಒವರ್ಟೇಕ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ಆರೋಪಿತರನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅಡ್ಡಗಟ್ಟಿ ನಮ್ಮ ವಾಹನವನ್ನು ತಡೆದಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ1 ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸಾ1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದೇನೆಂದರೆ ಸರಿಯಲ್ಲ. ಸದರಿ ದಿನ ಗಸ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆ ನಡೆಯದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಾಹನ ಅಮಾನತ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಬೇರೆಯವರಿಂದ ಆರೋಪಿತರ ಹೆಸರು ತಿಳಿದುಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವಿಚಾರವಾಗಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**